ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ಜಿ.ಕೆ.ವಿ.ಕೆ., ಬೆಂಗಳೂರು–560065

* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 07.07.2015

ಚಿಕ್ಕಬಳ್ಳಾಪುರ ಜಿಲ್ಲೆಗೆ ಸೀಮಿತವಾಗಿದೆ

ಈ ವಾರದ ಮುನ್ಸೂಚನೆ (ದಿನಾಂಕ 08.07.15 –12.07.15 ವರೆಗೆ)

	08.07.15	09.07.15	10.07.15	11.07.15	12.07.15
ಮಳೆ (ಮಿ ಮಿ)	0	2	3	3	2
ಗರಿಷ್ಠ ಉಷ್ಣಾಂಶ(ಡಿ.ಸೆ.)	32	32	32	31	32
ಕನಿಷ್ಠ ಉಷ್ಣಾಂಶ (ಡಿ.ಸೆ.)	21	22	22	21	21
ಮೋಡ (ಪ್ರಮಾಣ)	4	4	3	5	4
ಅರ್ದ್ರತೆ ೭.೨೦ ಬೆ (ಶೇ)	73	76	78	77	77
ಅರ್ದ್ರತೆ ೨.೨೦ ಮ (ಶೇ)	56	52	53	59	57
ಗಾಳಿಯ ವೇಗ (ಕಿ.ಮಿ/ಗಂಟೆಗೆ)	11	12	10	8	10
ಗಾಳಿಯ ದಿಕ್ಕು (ಡಿಗ್ರಿ)	270	260	270	270	270

ಮುಂದಿನ ದಿನಗಳಲ್ಲಿ ಹಗುರದಿಂದ ಮಳೆಯಾಗುವ ಸಂಭವವಿದೆ. ದಿನದ ಗರಿಷ್ಠ ಉಷ್ಣಾಂಶ **31.0-32.0°C** ಮತ್ತು ಕನಿಷ್ಠ **21.0-22.0°C** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **73-78 %** ಇದ್ದು ಮಧ್ಯಾಹ್ನ **52-59 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **8-12** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ವೇಗವಾದ ಗಾಳಿ ಇರುವುದರಿಂದ ಟೊಮ್ಯಾಟೋ ಹಾಗೂ ಇನ್ನಿತರ ತರಕಾರಿ ಬೆಳೆಗಳಿಗೆ ರಕ್ಷಣೆ ಕೂಡುವುದು ಅತಿ ಮುಖ್ಯ.
- ಎಲ್ಲೆಲ್ಲಿ ದೀರ್ಘಾವದಿ ಬೆಳೆಗಳು (ತೊಗರಿ ಮತ್ತು ಹರಳು) ಬಿತ್ತನೆ ಮಾಡಿದಲ್ಲಿ ಕಳೆ ನಿರ್ವಹಣೆ, ಮಣ್ಣು ಮತ್ತು ನೀರಿನ ಸಂರಕ್ಷಣೆಗೆ ಅಂತರ ಬೇಸಾಯವನ್ನು ಕೈಗೊಳ್ಳುವುದು.
- ಅಲ್ಪಾವದಿ ಬೆಳೆಗಳಾದ ಹೆಸರು, ಉದ್ದು ಮತ್ತು ತೃಣ ಧಾನ್ಯಗಳನ್ನು ಬೆಳೆದಿದಲ್ಲಿ ಅಂತರ ಬೇಸಾಯವನ್ನು ಕೈಗೊಳ್ಳುವುದು ಮತ್ತು ಒಣ ಹವೆಯನ್ನು ನಿಭಾಯಿಸಲು ಒಂದು ರಕ್ಷಣಾತ್ಮಕ ನೀರಾವರಿಯನ್ನು ಕೈಗೊಳ್ಳುವುದು.
- ಅಲ್ಪಾವದಿ ದ್ವಿದಳ ಧಾನ್ಯಬೆಳೆಗಳಾದ ಹೆಸರು, ಉದ್ದು ಧಾನ್ಯಗಳಲ್ಲಿ ಹೇನುಗಳ ಹತೋಟಿಗೆ ಡೈಮಿಥೋಯೇಟ್ – 30 ಇ.ಸಿ @ 1.7 ಮಿ.ಲೀ/ಲೀ ನೀರಿನಲ್ಲಿ ಅಥವಾ ಫಾಸ್ಫೊಮಿಡಾನ್ –100 ಇ,ಸಿ.@ 0.5 ಮಿ.ಲೀ/ಲೀ ನೀರಿನಲ್ಲಿ ಬೆರೆಸಿ ಸಿಂಪಡಿಸಿ.

ನೋಡಲ್ ಅಧಿಕಾರಿ:
ಕೃ.ವಿ.ವಿ, ಜಿ.ಕೆ.ವಿ.ಕೆ
ಬೆಂಗಳೂರು